# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

GROWTH DRIVEN BY PERFORMANCE

23 ವರ್ಷಗಳು 1994-2017



ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com Email : ho@ramakrishnacredit.com



ಸಂಪುಟ : II ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ–ಮಾರ್ಚ್ 2017


## ಅಧ್ಯಕ್ಷರ ಮಾತು

## ಕೃತಜ್ಞತೆಗಳು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

**ಸಂಘವು ದಿನಾಂಕ 31.03.2017ಕ್ಕೆ ಒಟ್ಟು ರೂ.242 ಕೋಟಿ ವ್ಯವಹಾರವನ್ನು ದಾಖಲಿಸಿ, ರೂ.134 ಕೋಟಿ ಠೇವಣಿ, ರೂ.108 ಕೋಟಿ ಹೊರಬಾಕಿ ಸಾಲದೊಂದಿಗೆ, ರೂ.4.03 ಕೋಟಿ ನಿವ್ವಳ ಲಾಭ ಗಳಿಸಿ, ಸುಸ್ತಿ ಸಾಲವು ರೂ.15 ಲಕ್ಷ ಮಾತ್ರಕ್ಕೆ ಸೀಮಿತಗೊಂಡು, ನಿವ್ವಳ ಅನುತ್ಪಾದಕ ಆಸ್ತಿ (Net NPA) 0% ಆಗಿ, 2016–17ನೇ ಸಾಲಿನಲ್ಲಿ ಸಂಘವು ಸಾಧಿಸಿರುವ ಈ ಅನನ್ಯ ಪ್ರಗತಿಯು "Treasury of Trust and Service" ಎಂಬ ನಾಣ್ನುಡಿಯನ್ನು ಅನ್ವರ್ಥಗೊಳಿಸಿದೆ ಎಂದು ಹೇಳಲು ಹರ್ಷಿಸುತ್ತೇನೆ.**

### Treasury of Trust and Service
### (ಅಖಂಡ ಭರವಸೆ ಹಾಗೂ ನಲ್ಮೆಯ ಸೇವೆಯ ಖನಿ)
### Sri Ramakrishna Credit Co-operative Society Ltd.

2016–17ನೇ ಸಾಲಿನಲ್ಲಿ ಅಪನಗದೀಕರಣ ಅವಧಿಗೆ ಮುನ್ನ ಅಂದರೆ ದಿನಾಂಕ 31.10.2016ರವರೆಗೆ ಸಂಘದ ಪ್ರಗತಿಯು ಉತ್ತಮವಾಗಿತ್ತು. ಅಪನಗದೀಕರಣ ದಿನಾಂಕ 07.11.2016ಕ್ಕೆ ಮತ್ತು ನಗದು ವ್ಯವಹಾರ ನಿರ್ಬಂಧಗಳನ್ನು ಸಡಿಲಗೊಳಿಸಿದ ದಿನಾಂಕ 14.03.2017ಕ್ಕೆ ಮತ್ತು ವರ್ಷಾಂತ್ಯ 31.03.2017ಕ್ಕೆ ಸಂಘವು ಹೊಂದಿದ ವ್ಯವಹಾರದ ತುಲನಾತ್ಮಕ ವಿವರಗಳು ಈ ಕೆಳಗಿನಂತಿದೆ.

| ದಿನಾಂಕ | ಠೇವಣಿ | ಸಾಲ | ಒಟ್ಟು ವ್ಯವಹಾರ |
|---|---|---|---|
| 31.03.2016 | ₹127 ಕೋಟಿ | ₹ 95 ಕೋಟಿ | ₹222 ಕೋಟಿ |
| 07.11.2016 | ₹133 ಕೋಟಿ | ₹108 ಕೋಟಿ | ₹241 ಕೋಟಿ |
| 14.03.2017 | ₹132 ಕೋಟಿ | ₹106 ಕೋಟಿ | ₹238 ಕೋಟಿ |
| 31.03.2017 | ₹134 ಕೋಟಿ | ₹108 ಕೋಟಿ | ₹ 242 ಕೋಟಿ |

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ 2016–17ನೇ ಸಾಲಿನಲ್ಲಿ ಅಪನಗದೀಕರಣದ ದಿನಾಂಕದವರೆಗೆ ಠೇವಣಿಯಲ್ಲಿ ರೂ.6 ಕೋಟಿ, ಸಾಲ ರೂ.13 ಕೋಟಿ ಹೆಚ್ಚಳವನ್ನು ಕಂಡಿತ್ತು. ಅಪನಗದೀಕರಣದ ದಿನಾಂಕ 08.11.2016 ರಿಂದ 14.03.2017ರ ಅವಧಿಯಲ್ಲಿ ವಾರಕ್ಕೆ ರೂ. 24,000/–ದಷ್ಟು ಮಾತ್ರ ನಗದು ಹಿಂಪಡೆತಕ್ಕೆ ಅವಕಾಶವಿತ್ತು ಹಾಗೂ ನಗದು ವ್ಯವಹಾರಕ್ಕೆ ಸಂಬಂಧಿಸಿ ಇತರ ನಿರ್ಬಂಧಗಳು ಕೂಡ ಜ್ಯಾರಿಯಲ್ಲಿತ್ತು, ಅಲ್ಲದೆ ಈ ಅವಧಿಯಲ್ಲಿ ಚಿನ್ನಾಭರಣಗಳ ಮಾರುಕಟ್ಟೆಧಾರಣೆ ಗಣನೀಯವಾಗಿ ಕುಸಿದಿದ್ದರೂ, ಸಂಘದಲ್ಲಿ ಠೇವಣಿಯು ರೂ.1 ಕೋಟಿ ಮತ್ತು ಸಾಲ ರೂ.2 ಕೋಟಿಯಷ್ಟು ಮಾತ್ರ ಕಡಿಮೆಯಾಗಿತ್ತು.

ನಗದು ವ್ಯವಹಾರದ ನಿರ್ಬಂಧಗಳನ್ನು ಸಡಿಲಗೊಳಿಸಿದ ದಿನಾಂಕ 14.03.2017ರಿಂದ ವರ್ಷಾಂತ್ಯ 31.03.2017ರವರೆಗಿನ 15 ದಿನಗಳಲ್ಲಿ ಸಂಘದ ವ್ಯವಹಾರವು ಉತ್ತಮಗೊಂಡು ಈ ಅವಧಿಯಲ್ಲಿ ಠೇವಣಿಯು ರೂ.2 ಕೋಟಿ ಮತ್ತು ಸಾಲದಲ್ಲಿ ರೂ.2 ಕೋಟಿಯಷ್ಟು ಏರಿಕೆಯಾಗಿ, 2016–17ನೇ ಸಾಲಿನಲ್ಲಿ ಈ ಪ್ರಗತಿಯನ್ನು ಸಾಧಿಸಲು ಸಾಧ್ಯವಾಯಿತು.

ಇದೀಗ ಆದಾಯಕರ ಇಲಾಖೆಯವರು ಸಹಕಾರಿ ಕ್ಷೇತ್ರದಲ್ಲಿ ರುವ ಠೇವಣಿಗಳ ಬಗ್ಗೆ ತಮ್ಮ ಗಮನಹರಿಸುತ್ತಿದ್ದು, ಈಗಾಗಲೇ ತಿಳಿಸಿರುವಂತೆ ಸದಸ್ಯ ಠೇವಣಿದಾರರು ಸಂಘದಿಂದ ಪಡೆಯುವ ಬಡ್ಡಿ ಆದಾಯ ಅಥವಾ ಡಿವಿಡೆಂಡ್‌ಗಳ ಮೇಲೆ ಸಂಘವು TDS ಮಾಡುವುದಿಲ್ಲ, ಆದರೆ ಸಂಘದಿಂದ ಬರುವ ಈ ಆದಾಯಗಳನ್ನು ಆದಾಯಕರ ಇಲಾಖೆಗೆ ಸಲ್ಲಿಸುವ ತಮ್ಮ ರಿಟರ್ನ್ಸ್‌ಗಳಲ್ಲಿ ಕಾಣಿಸುವುದು ಠೇವಣಿದಾರರ ಜವಾಬ್ದಾರಿಯಾಗಿದೆ.

ಈ ಕ್ಲಿಷ್ಟಕರ ಸಂದರ್ಭದಲ್ಲಿ, ಠೇವಣಿದಾರರು ಸಂಘದ ಮೇಲೆ ತೋರಿದ ಭರವಸೆ ಮತ್ತು ಸಾಲಗಾರರು ತಮ್ಮ ಸಾಲದ ಕಂತನ್ನು ಮತ್ತು ಬಡ್ಡಿಯನ್ನು ಕ್ಲಪ್ತವಾಗಿ ಮರುಪಾವತಿಸಿ ಸಹಕರಿಸಿರುವುದು ಅತ್ಯಂತ ಶ್ಲಾಘನೀಯ, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳು ನೀಡಿರುವ ಸಹಕಾರ ಉಲ್ಲೇಖನೀಯ, ಎಲ್ಲಾ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ಅವಧಿಯಲ್ಲಿ ತಮ್ಮ ಶಕ್ತಿ ಮೀರಿ ಅತ್ಯಂತ ಸಂಯಮ, ಮುತುವರ್ಜಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಿರುವುದು ಕೂಡ ಮುಖ್ಯವಾಗಿತ್ತು.

2016–17ನೇ ಸಾಲಿನಲ್ಲಿ ಈ ಅನನ್ಯ ಪ್ರಗತಿಯನ್ನು ಸಾಧಿಸಲು ಸಹಕರಿಸಿದ ಸಂಘದ ಎಲ್ಲಾ ನಿರ್ದೇಶಕರುಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರುಗಳಿಗೆ ಮತ್ತು ಸದಸ್ಯರುಗಳಿಗೆ, ಎಲ್ಲಾ ಸದಸ್ಯ ಠೇವಣಿದಾರರು ಮತ್ತು ಸಾಲಗಾರರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಸಂಘದ ಎಲ್ಲಾ ಸಿಬ್ಬಂದಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎಲ್ಲರಿಗೂ ವಿಷು ಹಬ್ಬದ ಹಾರ್ದಿಕ ಶುಭಕಾಮನೆಗಳು.

# ಚಿಲಿಂಬಿ ಶಾಖೆಯ ಗ್ರಾಹಕ ಸಂಪರ್ಕ ಸಭೆ



**ಸಂಘದ** ಚಿಲಿಂಬಿ ಶಾಖಾ ಗ್ರಾಹಕ ಸಂಪರ್ಕ ಸಭೆಯು ದಿನಾಂಕ 20/12/2016ರಂದು ಶಾಖಾ ವಠಾರದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀಯುತ ಕೆ. ಜೈರಾಜ್ ಬಿ. ರೈ ಇವರು ದೀಪ ಬೆಳಗಿಸಿ ಸಭೆಯನ್ನು ಉದ್ಘಾಟಿಸಿದರು.

ಸಭೆಯುನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರು, ಸಂಘದ ಸದಸ್ಯರಿಗಾಗಿ ಕಲ್ಯಾಣ ನಿಧಿ ಸ್ಥಾಪನೆ, ಸದ್ಯದಲ್ಲಿಯೇ ಸಂಘದ ಒಟ್ಟು ಶಾಖೆಗಳನ್ನು 18 ರಿಂದ 20ಕ್ಕೆ ತಲುಪಿಸುವುದು, ಸಂಘದ ಕೇಂದ್ರ ಕಛೇರಿಗೆ ಸ್ವಂತ ನಿವೇಶನ ಖರೀದಿ ಪ್ರಕ್ರಿಯೆ, ಸಂಘದ ವ್ಯವಹಾರದ ತಾಂತ್ರಿಕತೆ ಅಭಿವೃದ್ಧಿ, ಶೀಘ್ರದಲ್ಲಿ ಎಲ್ಲಾ ಶಾಖೆಗಳನ್ನು ಹವಾ ನಿಯಂತ್ರಿತ ವ್ಯವಸ್ಥೆಯೊಂದಿಗೆ ಆಧುನೀಕರಿಸಲಾಗುವುದು, ಎಂದು ತಿಳಿಸಿದರು. ಸಂಘದ ನಿರ್ದೇಶಕರಾದ ಸಿಎ ಹೆಚ್.ಆರ್.ಶೆಟ್ಟಿ ಇವರು ಸಂಘದ ಮೀಸಲು ನಿಧಿ ಸಂಘದ ಪಾಲು ಬಂಡವಾಳ ಕ್ಕಿಂತ ಹತ್ತುಕೋಟಿ ಹೆಚ್ಚು ಇದ್ದು ಸಂಘ ಸುದೃಡವಾಗಿದೆ ಎಂದರು. ಶ್ರೀಮತಿ ರತ್ನಕಾಂತಿ ಶೆಟ್ಟಿ ಇವರು ಸಂಘದ ಸ್ಥಾಪಕ ಅಧ್ಯಕ್ಷರಾದ ದಿ॥ ಕೆ.ಬಿ. ಜಯಪಾಲ್ ಶೆಟ್ಟಿ ಮತ್ತು ಈಗಿನ ಅಧ್ಯಕ್ಷರಾದ ಶ್ರೀ. ಕೆ ಜೈರಾಜ್ ಬಿ.ರೈ ಇವರುಗಳ ನಿಸ್ವಾರ್ಥ ಸೇವೆಗಳನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಉತ್ತಮ ಗ್ರಾಹಕರಾದ ಫೆಡ್ರಿಕ್ ಕ್ಲೆಮೆಂಟ್ ಮಥಾಯಸ್, ಶಿವರಾಜ್ ಶೆಟ್ಟಿ, ಶಿವರಾಜ್ ಸಾಲ್ಯಾನ್, ಶ್ರೀನಿವಾಸ್ ವಿ., ಬಂಟರ ಸಂಘ ಕೋಡಿಕಲ್, ಹಾಗೂ ಕಟ್ಟಡ ಮಾಲಕರಾದ ಪಿ.ಪಿ.ಎಸ್.ಎ. ಕ್ಲಬ್‌ರವರನ್ನು ಗೌರವಿಸಲಾಯಿತು. ಸಂಘದ ಪ್ರಭಾರ ಮಹಾಪ್ರಬಂಧಕರಾದ ಗಣೇಶ್ ಜಿ.ಕೆ.ಯವರು, ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ರಿಚಾರ್ಡ್ ಡಿಕೋಸ್ತ, ವಾಸು ಶೆಟ್ಟಿ, ಜೆನಿವಿವ್ ಮಥಾಯಸ್, ವಿನಯ ಬಲ್ಲಾಳ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ, ಸುಮತಿ ಡಿ. ಶೆಟ್ಟಿ ಇವರು ಸ್ವಾಗತಿಸಿ, ಯಂ. ವಿಶ್ವನಾಥ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಶಾಖಾಧಿಕಾರಿ ತಿಮ್ಮಯ್ಯ ಶೆಟ್ಟಿ ವಂದಿಸಿದರು.

# ಕಾರ್ಕಳ ಶಾಖೆಯ ಗ್ರಾಹಕ ಸಂಪರ್ಕ ಸಭೆ



ಸಂಘದ ಕಾರ್ಕಳ ಶಾಖೆಯ ಗ್ರಾಹಕ ಸಂಪರ್ಕ ಸಭೆಯು ದಿನಾಂಕ 24.12.2016ರಂದು ಜರಗಿತು. ಸಂಘದ ಕಾರ್ಕಳ ಶಾಖೆಯ ಗ್ರಾಹಕರ ಸಭೆಯು ಹೋಟೇಲ್ ಪ್ರಕಾಶ್‌ನ ಸಭಾಂಗಣದಲ್ಲಿ ಶನಿವಾರ ನಡೆಯಿತು.

ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ಉದ್ಘಾಟಿಸಿ, ಇಪ್ಪತ್ತು ವರ್ಷಗಳನ್ನು ನಿಷ್ಕಳಂಕವಾಗಿ ಪೂರ್ಣಗೊಳಿಸಿದ ಸೊಸೈಟಿ ಗ್ರಾಹಕರ ಹಿತಕ್ಕಾಗಿ ಯೋಜನೆ ರೂಪಿಸುತ್ತಿದೆ. ರಾಜ್ಯ ಮಟ್ಟದ ಪ್ರಶಸ್ತಿ ಮೂರು ಬಾರಿ, ಎಸ್‌ಸಿ.ಡಿಸಿಸಿ ಬ್ಯಾಂಕಿನಿಂದ ಐದು ಬಾರಿ ಸಾಧನಾ ಪ್ರಶಸ್ತಿ ಪಡೆದುಕೊಂಡಿದ್ದು, ಶೇ.100 ಸಾಲ ವಸೂಲಾತಿ ಮಾಡಿದೆ. ತಂತ್ರಜ್ಞಾನವನ್ನು ಉನ್ನತೀಕರಿಸಲಾಗುತ್ತಿದ್ದು, ಕ್ಯಾಶ್ ಲೆಸ್ ವ್ಯವಹಾರದತ್ತ ಪ್ರಯತ್ನ ನಡೆಸಲಾಗುವುದು. ಸಂಸ್ಥೆಯು ಭವಿಷ್ಯದ ಬೆಳವಣಿಗೆಗೆ ಗ್ರಾಹಕರ ಅಭಿಪ್ರಾಯಗಳು ಅಗತ್ಯ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ ಕಾರ್ಕಳ ಶಾಖೆಯ ಸಲಹಾ ಸಮಿತಿ ಅಧ್ಯಕ್ಷ ಶಿವರಾಮ ಶೆಟ್ಟಿ ಅಧ್ಯಕ್ಷತೆ ಮಾತನಾಡಿ ಶಾಖೆಯನ್ನು ಹವಾನಿಯಂತ್ರಿತ ವ್ಯವಸ್ಥೆಯೊಂದಿಗೆ ನವೀಕರಿಸಿ ನೀಡಿ ಗ್ರಾಹಕರಿಗೆ ಇನ್ನಷ್ಟು ಉತ್ತಮವಾಗಿ ಸೇವೆಯನ್ನು ನೀಡಲು ಕಾರ್ಕಳ ಶಾಖೆಗೆ ಅವಕಾಶ ಮಾಡಿಕೊಟ್ಟದ್ದಕ್ಕೆ ಸಂಘದ ಅಧ್ಯಕ್ಷರಿಗೆ ಅಭಿನಂದನೆಯನ್ನು ತಿಳಿಸಿದರು. ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ., ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀಮತಿ ವಿನೋದಾ ಶೆಟ್ಟಿ, ಡಾ। ರವಿರಾಜ್ ಶೆಟ್ಟಿ, ಅಜಿತ್ ಹೆಗ್ಡೆ, ಸದಾನಂದ ಶೆಟ್ಟಿ, ಆನಂದ ಶೆಟ್ಟಿ, ಕೆ.ವಿ. ಭಂಡಾರಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಗ್ರಾಹಕರುಗಳಾದ ಬಂಟರ ಮಾತೃ ಸಂಘದ ಕಾರ್ಕಳ ತಾಲೂಕು ಸಮಿತಿ, ಕೆ. ವಿಶ್ವನಾಥ ಹೆಗ್ಡೆ, ಜ್ಯೋತಿ, ಸುಧಾಕರ್, ರಾಘವೇಂದ್ರ ಅವರನ್ನು ಗೌರವಿಸಲಾಯಿತು. ಗ್ರಾಹಕರಾದ ಕೆ.ಎ.ಶೆಟ್ಟಿ, ಸುಜಾತ ಭಂಡಾರಿ, ಪ್ರಕಾಶ್, ಸುನಿಲ್ ಕುಮಾರ್ ಶೆಟ್ಟಿಯವರ ಪ್ರಶ್ನೆಗಳಿಗೆ ಅಧ್ಯಕ್ಷ ಜೈರಾಜ್ ಬಿ.ರೈಯವರು ಉತ್ತರಿಸಿದರು. ಶಾಖಾ ಸಲಹಾ ಸಮಿತಿ ಸದಸ್ಯ ಪ್ರಶಾಂತ್ ಶೆಟ್ಟಿ ಸ್ವಾಗತಿಸಿದರು. ಶಿಕ್ಷಕ ಹರಿಶ್ಚಂದ್ರ ಕಾರ್ಯಕ್ರಮ ನಿರೂಪಿಸಿದರು. ಶಾಖಾಧಿಕಾರಿ ವಿರಾಜ್ ಶೆಟ್ಟಿ ವಂದಿಸಿದರು.

# ಸುಳ್ಯ ಶಾಖೆಯ ಗ್ರಾಹಕ ಸಂಪರ್ಕ ಸಭೆ



ಸಂಘದ ಸುಳ್ಯ ಶಾಖೆಯ ವತಿಯಿಂದ ಗ್ರಾಹಕರ ಸಂಪರ್ಕ ಸಭೆಯು ದಿನಾಂಕ 25.03.2017ರಂದು ದ್ವಾರಕ ಹೋಟೇಲ್‌ನ ಸಭಾಭವನದಲ್ಲಿ ನಡೆಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರು ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಶಾಖಾ ಸಲಹಾ ಸಮಿತಿ ಸದಸ್ಯರಾದ ಎಸ್. ಜಯಪ್ರಕಾಶ್ ರೈ ವಹಿಸಿದ್ದರು. ಸುಳ್ಯ ಶಾಖೆಯ ಉಸ್ತುವಾರಿ ನಿರ್ದೇಶಕರಾದ ಪಿ.ಬಿ. ದಿವಾಕರ ರೈಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ನಿರ್ದೇಶಕರಾದ ದಯಾಕರ ಆಳ್ವ, ಸಂಘದ ಮಹಾಪ್ರಬಂಧಕರಾದ ಗಣೇಶ್ ಜಿ.ಕೆ., ಸುಳ್ಯ ಶಾಖಾ ವ್ಯವಸ್ಥಾಪಕರಾದ ದಿನೇಶ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಉತ್ತಮಗ್ರಾಹಕರಾಗಿ, ಸುಳ್ಯ ಬಂಟರ ಸಂಘ, ಶಶಿಧರ ರೈ, ಸುರೇಶ್ಚಂದ್ರ ಭಟ್, ಮಹಮ್ಮದ್ ಎಸ್.ಎ., ವಿಖ್ಯಾತ್ ರೈ, ಪ್ರಕಾಶ್ ಬಂಗ್ಲೆಗುಡ್ಡೆಯವರನ್ನು ಗೌರವಿಸಲಾಯಿತು. ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಜಯರಾಮ ಆಳ್ವ, ದಯಾನಂದ ಆಳ್ವ, ಗಂಗಾಧರ ರೈ, ಸುದೇಶ್ ಕುಮಾರ್ ಶೆಟ್ಟಿ, ಸನತ್ ಕುಮಾರ್ ರೈ, ಕರ್ನಲ್ ಶರತ್‌ಚಂದ್ರ ಭಂಡಾರಿ, ಜಯಸೂರ್ಯ ರೈ ಉಪಸ್ಥಿತರಿದ್ದರು. ಸುಧಾಕರ ರೈ ಸ್ವಾಗತಿಸಿದರು. ಕುಸುಮಾಧರ ರೈ ನಿರೂಪಿಸಿದರು.

# ಪುತ್ತೂರು ಶಾಖೆಯ ಗ್ರಾಹಕ ಸಂಪರ್ಕ ಸಭೆ




ಸಂಘದ ಪುತ್ತೂರು ಶಾಖೆಯಲ್ಲಿ ಗ್ರಾಹಕ ಸಂಪರ್ಕ ಸಭೆ ದಿನಾಂಕ 11.03.2017ರಂದು ಜರಗಿತು. ದೀಪ ಬೆಳಗಿಸಿ ಉದ್ಘಾಟಿಸಿದ ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರು ಮಾತನಾಡಿ, ಈ ಶಾಖೆಯು 21 ವರ್ಷಗಳನ್ನು ಪೂರ್ಣಗೊಳಿಸಿರುತ್ತದೆ. ಸಂಘವು ಗ್ರಾಹಕರ ಅನುಕೂಲಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸುತ್ತಿದೆ ಎಂದು ತಿಳಿಸಿದರು.

ಸಂಘದ ನಿರ್ದೇಶಕ ಕೆ. ಸೀತಾರಾಮ ರೈ ಸವಣೂರು ಮಾತನಾಡಿ, ಸಂಘವು ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲಿ ಹೆಸರುವಾಸಿಯಾಗಿದ್ದು ಸುಮಾರು 50 ಸಾವಿರಕ್ಕಿಂತ ಹೆಚ್ಚು ಸದಸ್ಯರು ಸಂಘದಲ್ಲಿ ವ್ಯವಹರಿಸುತ್ತಿದ್ದಾರೆ ಎಂದರು.

ಸಂಘದ ನಿರ್ದೇಶಕ ಪ್ರಸಾದ್ ಕೌಶಲ್ ಶೆಟ್ಟಿ ಮಾತನಾಡಿ, ಸಂಘದ ಮೇಲೆ ಸದಸ್ಯರು ಮತ್ತು ಗ್ರಾಹಕರಿಗೆ ಉತ್ತಮ ಅಭಿಪ್ರಾಯ ಇರುವುದಾಗಿ ಹೇಳಿದರು. ಸಂಘದ ಪುತ್ತೂರು ಶಾಖಾ ಸಲಹಾ ಸಮಿತಿಯ ಅಧ್ಯಕ್ಷ ಎ. ಚಿಕ್ಕಪ್ಪ ನ್ಯಾಕ್ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಸಂಘದ ಉತ್ತಮ ಗ್ರಾಹಕರಾದ ಬಂಟರ ಸಂಘ ಪುತ್ತೂರು, ರಾಮಕೃಷ್ಣ ಪ್ರೌಢಶಾಲೆ ಪುತ್ತೂರು, ರಘುನಾಥ ರೈ ಬೆಳ್ಳಿಪಾಡಿ, ಶ್ರೀಧರ ಗೌಡ, ಬಿ.ಕೆ. ಅಬ್ದುಲ್ ರಹಿಮಾನ್ ಮತ್ತು ಅಬ್ದುಲ್ ರಝಾಕ್‌ರವರನ್ನು ಸಂಘದ ಅಧ್ಯಕ್ಷರು ಗೌರವಿಸಿದರು.

ಸಂಘದ ಮಹಾಪ್ರಬಂಧಕ ಗಣೇಶ್ ಜಿ.ಕೆ., ಪುತ್ತೂರು ಶಾಖಾ ಸಲಹಾ ಸಮಿತಿಯ ಸದಸ್ಯರುಗಳಾದ ಸುಂದರ ರೈ ಸವಣೂರು, ಸಂಜೀವ ಆಳ್ವ, ಜಯರಾಮ ರೈ, ಗಂಗಾಧರ್ ರೈ, ಉದಯಶಂಕರ್ ಶೆಟ್ಟಿ ಮತ್ತು ಪ್ರವೀಣ್ ಭಂಡಾರಿ ಎಚ್. ಉಪಸ್ಥಿತರಿದ್ದರು.

ಶ್ರೀಮತಿ ಮಲ್ಲಿಕಾ ರೈ ಪ್ರಾರ್ಥಿಸಿದರು. ಸಂಘದ ಶಾಖಾ ಸಲಹಾ ಸಮಿತಿಯ ಸದಸ್ಯರುಗಳಾದ ಶ್ರೀ ದುರ್ಗಾಪ್ರಸಾದ್ ರೈ ಸ್ವಾಗತಿಸಿ, ಶ್ರೀಮತಿ ರೂಪರೇಖಾ ಆಳ್ವ ಕಾರ್ಯಕ್ರಮ ನಿರೂಪಿಸಿದರು. ಶಾಖಾಧಿಕಾರಿ ಕರುಣಾಕರ ಶೆಟ್ಟಿ ವಂದಿಸಿದರು.

# ವೆಲೆನ್ಸಿಯಾ ಶಾಖೆಯ ಗ್ರಾಹಕ ಸಂಪರ್ಕ ಸಭೆ




ಸಂಘದ ವೆಲೆನ್ಸೀಯಾ ಶಾಖೆಯ ಗ್ರಾಹಕರ ಸಂಪರ್ಕ ಸಭೆ ವೆಲೆನ್ಸೀಯಾ ಶಾಖೆಯಲ್ಲಿ ದಿನಾಂಕ 23.03.2017ರಂದು ನಡೆಯಿತು. ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ಉದ್ಘಾಟಿಸಿ ಮಾತನಾಡಿ, ಮುಂದಿನ ದಿನಗಳಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಸಂಘವನ್ನು ಆಧುನಿಕ ತಂತ್ರಜ್ಞಾನ ಬಳಸಿ ಡಿಜಿಟಲೀಕರಣ ಮಾಡಲಾಗುವುದು. ಭವಿಷ್ಯದಲ್ಲಿ ಡಿಜಿಟಲೀಕರಣಕ್ಕೆ ಹೆಚ್ಚು ಒತ್ತು ನೀಡುವ ಅವಶ್ಯಕತೆ ಇದೆ ಎಂದು ತಿಳಿಸಿದರು. ಅಲ್ಲದೇ ಈ ಸಂಸ್ಥೆಯಲ್ಲಿ ಪ್ರಾಮಾಣಿಕ ಗ್ರಾಹಕರು ಇರುವುದರಿಂದ ಸಂಸ್ಥೆಯ ಅನುತ್ಪಾದಕ ಸಾಲ ಶೂನ್ಯವಾಗಿರಲು ಸಾಧ್ಯವಾಯಿತು ಎಂದು ತಿಳಿಸಿದರು.

ಸಂಘದ ನಿರ್ದೇಶಕ ಹಾಗೂ ಶಾಖಾ ಸಲಹಾ ಸಮಿತಿಯ ಅಧ್ಯಕ್ಷ ಎಂ. ರಾಮಯ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿ ಈ ಸಂಘ ಸಹಕಾರ ತತ್ವದಡಿಯಲ್ಲಿ ಸ್ಥಾಪನೆಯಾಗಿ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಾ ಬಂದಿದೆ. ಗ್ರಾಹಕರ ಉತ್ತಮ ಸಹಕಾರದಿಂದ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತದೆ. ಅಲ್ಲದೇ ವೆಲೆನ್ಸೀಯಾ ಶಾಖೆ ಸ್ಥಾಪಿಸಿ ಕೇವಲ ಎಂಟು ವರ್ಷಗಳಲ್ಲೇ ಹೆಚ್ಚು ಲಾಭದತ್ತ ಮುನ್ನಡೆದಿದೆ ಎಂದು ತಿಳಿಸಿದರು.

ಸಂಘದ ಮಹಾಪ್ರಬಂಧಕ ಗಣೇಶ್ ಜಿ.ಕೆ. ಶಾಖಾ ಸಲಹಾ ಸಮಿತಿ ಸದಸ್ಯರಾದ ತಿಮ್ಮಪ್ಪ ಶೆಟ್ಟಿ, ರಾಘವ ಶೆಟ್ಟಿ, ಲಕ್ಷಣ ಶೆಟ್ಟಿ, ದೇರಣ್ಣ ಶೆಟ್ಟಿ ಉಪಸ್ಥಿತರಿದ್ದರು.ಈ ಸಭೆಯಲ್ಲಿ ಉತ್ತಮ ಗ್ರಾಹಕರಾದ ಶ್ರೀ ಗುಣಪ್ರಸಾದ್ ನ್ಯಾಕ್, ಶ್ರೀ ಶ್ಯಾಮ ಸುಂದರ್, ಶ್ರೀ ಯು.ಎಂ.ಇಕ್ಬಾಲ್, ಮೊಹಮ್ಮದ್ ಅಶ್ರಾಫ್, ಎಲ್ವಿನ್ ವಿಕ್ಟರ್ ಗೋವಿಯಾಸ್ ಹಾಗೂ ಕಟ್ಟಡ ಮಾಲಿಕರಾದ ಶ್ರೀಮತಿ ಜಾನ್ ಗೋವಿಯಾಸ್ ರವರನ್ನು ಅಭಿನಂದಿಸಲಾಯಿತು. ವೆಲೆನ್ಸೀಯಾ ಶಾಖೆಯ ಶಾಖಾ ವ್ಯವಸ್ಥಾಪಕ ಚಂದ್ರಹಾಸ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಖಾ ಸಲಹಾ ಸಮಿತಿಯ ಸದಸ್ಯ ಎ. ಸುರೇಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಶಾಖಾ ಸಲಹಾ ಸಮಿತಿಯ ಸದಸ್ಯ ಜೆ.ಜಯರಾಮ ಶೆಟ್ಟಿ ವಂದಿಸಿದರು.

# ಮುಲ್ಕಿ ಶಾಖೆಯ ಗ್ರಾಹಕ ಸಂಪರ್ಕ ಸಭೆ




ಸಂಘದ ಮುಲ್ಕಿ ಶಾಖೆಯಲ್ಲಿ ದಿನಾಂಕ 29.03.2017ರಂದು ಜರಗಿದ ಗ್ರಾಹಕ ಸಂಪರ್ಕ ಸಭೆಯನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡುತ್ತಾ ಸದಸ್ಯ ಸಂಘದಲ್ಲಿಡುವ ಠೇವಣಾತಿಗಳಿಂದ ಬರುವ ಬಡ್ಡಿ ಆದಾಯ ಮತ್ತು ಷೇರುಗಳ ಮೇಲಿನ ಲಾಭಾಂಶಗಳು ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಬರುವುದು. ಅದಕ್ಕೆ ಸರಿಯಾದ ಆದಾಯ ತೆರಿಗೆ ರಿಟರ್ನ್ಸ್‌ಗಳನ್ನು ಕಾಲಕಾಲಕ್ಕೆ ಫೈಲ್ ಮಾಡುವುದು ಸದಸ್ಯರ ಜವಾಬ್ದಾರಿಯಾಗಿದೆ ಎಂದು ಗ್ರಾಹಕರುಗಳಿಗೆ ತಿಳಿಸಿದರು.

ಸಭಾಧ್ಯಕ್ಷತೆಯನ್ನು ವಹಿಸಿದ ಸಂಘದ ನಿರ್ದೇಶಕರು ಹಾಗೂ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾದ ಶ್ರೀ ರವೀಂದ್ರನಾಥ ಜಿ. ಹೆಗ್ಡೆಯವರು ಮುಲ್ಕಿ ಶಾಖೆಯ ಪ್ರಗತಿಯನ್ನು ಪ್ರಶಂಸಿಸಿ ಸಹಕಾರ ನೀಡಿದ ಗ್ರಾಹಕರಿಗೆ ಅಭಿನಂದನೆಯನ್ನು ತಿಳಿಸಿದರು.

ಶಾಖೆಯಲ್ಲಿ ಉತ್ತಮ ವ್ಯವಹಾರವನ್ನು ಮಾಡಿದ ಗ್ರಾಹಕರುಗಳಾದ ಬಂಟರ ಸಂಘ ಮುಲ್ಕಿ, ರವಿರಾಜ್ ಶೆಟ್ಟಿ, ಚಂದ್ರಹಾಸ್ ಶೆಟ್ಟಿ, ಸಂಜೀವ ಅಮೀನ್, ಹೊನ್ನಯ್ಯ ಸುವರ್ಣ, ಎನ್.ಎ. ಅನ್ಸಾರ್‌ರವರು ಮತ್ತು ಕಟ್ಟಡ ಮಾಲಿಕರಾದ ಶ್ರೀಮತಿ ವಿಜಯ ಎಸ್. ಶೆಟ್ಟಿಯವರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಶಾಖೆಯಿಂದ ವರ್ಗಾವಣೆಯಾದ ಸಿಬ್ಬಂದಿ ಶ್ರೀಮತಿ ತುಳಸಿಯವರನ್ನು ಅಭಿನಂದಿಸಲಾಯಿತು. ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ., ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಎಚ್.ಆರ್. ಶೆಟ್ಟಿ, ಮುರಳೀಧರ ಭಂಡಾರಿ, ಶ್ರೀನಾಥ್ ಹೆಗ್ಡೆ, ಶೇಖರ ಶೆಟ್ಟಿ, ಪಾಂಡುರಂಗ ಶೆಟ್ಟಿ, ರಾಮಚಂದ್ರ ನ್ಯಾಕ್ ಉಪಸ್ಥಿತರಿದ್ದರು. ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಮನೋಹರ್ ಶೆಟ್ಟಿಯವರು ಸ್ವಾಗತಿಸಿ, ಶಾಖಾಧಿಕಾರಿ ಶ್ರೀಮತಿ ಅನಿತಾ ಎ. ವಂದಿಸಿದರು. ಅಕೌಂಟೆಂಟ್ ಶ್ರೀ ಪ್ರಶಾಂತ್ ಪಿ.ಎ. ನಿರೂಪಿಸಿದರು.

## ಉಪ್ಪಿನಂಗಡಿ ಶಾಖೆಯ ಗ್ರಾಹಕ ಸಂಪರ್ಕ ಸಭೆ




ದಿನಾಂಕ 28.03.2017ರಂದು ಜರಗಿದ ಉಪ್ಪಿನಂಗಡಿ ಶಾಖೆಯ ಗ್ರಾಹಕರ ಸಂಪರ್ಕ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಉದ್ಘಾಟಿಸಿ ಮಾತನಾಡುತ್ತಾ ಗ್ರಾಹಕರೇ ಸಹಕಾರಿ ಸಂಸ್ಥೆಯೊಂದರ ಬೆನ್ನೆಲುಬಾಗಿದ್ದು, ಗ್ರಾಹಕರು ನೀಡಿದ ಉತ್ತಮ ಸಹಕಾರದಿಂದ ಸಂಘವು ಉತ್ತಮ ಪ್ರಗತಿಯನ್ನು ಸಾಧಿಸಿದೆ. ಅತೀ ಶೀಘ್ರದಲ್ಲಿ ಉಪ್ಪಿನಂಗಡಿ ಶಾಖೆಗೆ ಎಸಿ ಅಳವಡಿಸಲಾಗುವುದು. ಅಲ್ಪಾವಧಿಯಲ್ಲಿ ಸಂಘದ ದೊಡ್ಡ ಮಟ್ಟದ ಈ ಪ್ರಗತಿಗೆ ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ಗ್ರಾಹಕರ ಸಹಕಾರವೇ ಕಾರಣ ಎಂದು ಅಭಿನಂದಿಸಿದರಲ್ಲದೆ, ಕ್ಲಪ್ತ ಸಮಯದಲ್ಲಿ ಅಸಲು ಮತ್ತು ಬಡ್ಡಿ ಮರು ಪಾವತಿ ಆದಾಗ ಮಾತ್ರ ಹಣಕಾಸು ಸಂಸ್ಥೆಯೊಂದರ ಭವಿಷ್ಯ ಉತ್ತಮವಾಗಲು ಸಾಧ್ಯ ಎಂದರು.

ಸಂಘದ ನಿರ್ದೇಶಕ ಸವಣೂರು ಸೀತಾರಾಮ ರೈ ಮಾತನಾಡಿ, ದೇಶದ ಆರ್ಥಿಕ ಸ್ಥಿತಿಗೆ ಮೂರರಲ್ಲಿ ಒಂದು ಭಾಗ ಸಹಕಾರಿ ಕ್ಷೇತ್ರ ಭರಿಸುತ್ತಿದೆ. ಸಂಘವು ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಉತ್ತಮ ಸಹಕಾರಿ ಸಂಸ್ಥೆ ಯೆಂದು ಹೆಸರು ಪಡೆದಿದೆ ಎಂದರು. ಉಪ್ಪಿನಂಗಡಿ ಶಾಖಾ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಸಂಘದ ನಿರ್ದೇಶಕರಾಗಿರುವ ಪ್ರಸಾದ್‌ಕೌಶಲ್ ಶೆಟ್ಟಿ ಬೆಳ್ಳಿಪಾಡಿ ಮಾತನಾಡಿ, ಗ್ರಾಹಕರ ಸಲಹೆ ಸೂಚನೆ ನೀಡಿದಾಗ ಉತ್ತಮ ಕಾರ್ಯನಿರ್ವಹಣೆ ಸಾಧ್ಯವಾಗುತ್ತದೆ ಎಂದರು. ಸಂಘದ ನಿರ್ದೇಶಕ ದಯಾಕರ ಆಳ್ವ ಶುಭಾಶಂಸನೆ ಗೈದರು. ಕೆ. ಶೀನಪ್ಪ ಶೆಟ್ಟಿ, ಯು.ವಿ. ಭಟ್, ವಿನ್ಸೆಂಟ್ ಫೆರ್ನಾಂಡಿಸ್, ಯಾಕೂಬ್, ಶ್ರೀರಾಮ ಮತ್ತು ಶಾಖಾ ಕಟ್ಟಡ ಮಾಲಕರಾದ ಪ್ರಕಾಶ್ ಭಟ್‌ರವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಹಾಪ್ರಬಂಧಕರಾದ ಗಣೇಶ್ ಜಿ.ಕೆ., ಶಾಖಾ ಸಲಹಾ ಸಮಿತಿ ಸದಸ್ಯರಾದ ಧನ್ಯಕುಮಾರ್ ರೈ, ಸುಧಾಕರ ಶೆಟ್ಟಿ ಕೋಟೆ, ಕಂಗ್ವೆ ವಿಶ್ವನಾಥ ಶೆಟ್ಟಿ, ಉದಯಕುಮಾರ್ ಉಪಸ್ಥಿತರಿದ್ದರು. ಸಲಹಾ ಸಮಿತಿ ಸದಸ್ಯರಾದ ಕರುಣಾಕರ ಸುವರ್ಣರವರು ಸ್ವಾಗತಿಸಿ, ನಿರಂಜನ್ ರೈ ಮಠಂತಬೆಟ್ಟು ಕಾರ್ಯಕ್ರಮ ನಿರೂಪಿಸಿದರು, ಶಾಖಾಧಿಕಾರಿ ಶ್ರೀಹರ್ಷ ಡಿ.ಎಸ್. ವಂದಿಸಿದರು.

### ಬೀಳ್ಕೊಡುಗೆ

ಸಂಘದ ಬ್ರಹ್ಮಾವರ ಶಾಖೆಯ ಶಾಖಾಧಿಕಾರಿಯಾಗಿದ್ದ ಶ್ರೀ ಪ್ರಭಾಕರ್ ರವರು ದಿನಾಂಕ 30.03.2017ರಂದು ರಾಜೀನಾಮೆ ನಿಮಿತ್ತ ಸಂಘದ ಸೇವೆಯಿಂದ ವಿರಮಿಸಿದರು. ಈ ಹಿಂದೆ ಹೆಬ್ರಿ ಮತ್ತು ಕುಂದಾಪುರ ಶಾಖೆಗಳಲ್ಲಿ ಶಾಖಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಇವರು ಸಂಘದಲ್ಲಿ ವಿವಿಧ ಹುದ್ದೆಗಳಲ್ಲಿ ಸ್ತುತ್ಯರ್ಹ ಸೇವೆಯನ್ನು ಸಲ್ಲಿಸಿರುವರು. ಇವರ ಮುಂದಿನ ಜೀವನವು ಸಕಲ ಯಶಸ್ಸಿಂದ ಕೂಡಿರಲಿ ಎಂದು ಹಾರೈಸುತ್ತೇವೆ. ಶ್ರೀ ಪ್ರಭಾಕರ್‌ರವರನ್ನು ಹೃತ್ಪೂರ್ವಕವಾಗಿ ಬೀಳ್ಕೊಡುತ್ತಾ ಅವರಿಗೆ ಶುಭಹಾರೈಕೆಗಳು ತಿಳಿಸುತ್ತಿದ್ದೇವೆ.

### ಅಭಿನಂದನೆಗಳು



ಸಂಘದ ನಿರ್ದೇಶಕರಾದ ಶ್ರೀ ಪ್ರಸಾದ್ ಕೌಶಲ್ ಶೆಟ್ಟಿಯವರನ್ನು ಪುತ್ತೂರು ನಗರಾಭಿವೃದ್ಧಿ ಪ್ರಾಧಿಕಾರದ (ಪೂಡ) ಅಧ್ಯಕ್ಷರಾಗಿ ಕರ್ನಾಟಕ ಸರ್ಕಾರವು ನೇಮಿಸಿದೆ. ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಇವರನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ಪೂಡಾದ ಕಛೇರಿಗೆ ಭೇಟಿ ನೀಡಿ ಹೂಗುಚ್ಛ ನೀಡಿ ಸಂಘದ ವತಿಯಿಂದ ಅಭಿನಂದಿಸಿ ಶುಭ ಹಾರೈಸಿದರು.

### ಶಾಖಾಧಿಕಾರಿಗಳ ಸಭೆ



ದಿನಾಂಕ 12.3.2017ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಶಾಖಾಧಿಕಾರಿಗಳ ಸಭೆ ಜರಗಿತು. ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ದೀಪಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಶ್ರೀ ಸೀತಾರಾಮ ರೈ ಸವಣೂರು, ಶ್ರೀ ಎಂ. ರಾಮಯ ಶೆಟ್ಟಿ, ಶ್ರೀ ಕೆ. ದಯಾಕರ ಆಳ್ವ ಉಪಸ್ಥಿತರಿದ್ದರು.

### ಶ್ರದ್ಧಾಂಜಲಿ

- ನಿರ್ದೇಶಕರಾದ ಸಿಎ. ಎಚ್.ಆರ್. ಶೆಟ್ಟಿಯವರ ಮಾತೃಶ್ರೀಯವರಾದ ಶ್ರೀಮತಿ ಕನಕಾಂಗಿ ಶೆಟ್ಟಿಯವರು ದೈವಾಧೀನರಾಗಿರುವರು. ಅಗಲಿದ ದಿವ್ಯಾತ್ಮಕ್ಕೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.
- ಸುರತ್ಕಲ್ ಶಾಖೆಯಲ್ಲಿ ಪ್ರಬಂಧಕರಾದ ಶ್ರೀಮತಿ ರೇಖಾ ಎನ್. ಶೆಟ್ಟಿಯವರ ತೀರ್ಥರೂಪರಾದ ಶ್ರೀ ನಾರಾಯಣ ಬಿ. ಶೆಟ್ಟಿಯವರು ದೈವಾಧೀನರಾಗಿರುವರು. ಅಗಲಿದ ದಿವ್ಯಾತ್ಮಕ್ಕೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

Private Circulation only

BOOK-POST

To,

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.